

# ‘ಪವರ್‌ಫುಲ್’ ಸಾಧಕಿ ಗೀತಾಬಾಯಿ

ಪವರ್‌ಲಿಫ್ಟಿಂಗ್‌ನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನೂ ಪಡೆದಿರುವ ಮಂಗಳೂರಿನ ಗೀತಾಬಾಯಿ ಈ ಬಾರಿಯ ರಾಣಿ ಚೆನ್ನಮ್ಮ ಪ್ರಶಸ್ತಿ ವಿಜೇತೆಯೂ ಹೌದು.

■ ಅಶ್ವಿನಿ ಎನ್. ಹಕ್ಲಾಡಿ

ಹೆಸರು ಗೀತಾಬಾಯಿ. ಓದಿದ್ದು ಕೇವಲ ಒಂಬತ್ತನೇ ತರಗತಿ. ಆದರೆ ಈಕೆ ಅಂತಾರಾಷ್ಟ್ರೀಯ ಮಟ್ಟದ ಪವರ್ ಲಿಫ್ಟಿಂಗ್‌ನಲ್ಲಿ ಚಾಂಪಿಯನ್.

ಒಟ್ಟು 16 ಬಾರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಇವರ ಸಾಧನೆ ಗಮನಾರ್ಹ. ಅಂತಾರಾಷ್ಟ್ರೀಯ ಕ್ರೀಡಾಪಟುವಾಗಿರುವ ಇವರು ಭಾರತದ ಪ್ರತಿನಿಧಿಯಾಗಿ ಫಿನ್ಲೆಂಡ್, ಜಪಾನ್, ಅಮೆರಿಕಾ ಮುಂತಾದ ಕಡೆಗಳಲ್ಲಿ ನಡೆದ ಕ್ರೀಡಾಕೂಟಗಳಲ್ಲಿ ಸ್ಪರ್ಧಿಸಿ ಸುಮಾರು 30 ಕ್ಕೂ ಹೆಚ್ಚು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಪಡೆದಿದ್ದಾರೆ.

ರಾಷ್ಟ್ರೀಯ, ದಕ್ಷಿಣ ವಲಯ, ರಾಜ್ಯಮಟ್ಟಗಳಲ್ಲೂ ಕೂಡ ಸ್ಪರ್ಧಿಸಿ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ಇವರು 200ಕ್ಕೂ ಅಧಿಕ ಸನ್ಮಾನಗಳನ್ನು ಪಡೆದಿದ್ದಾರೆ.

ಕೇರಳ, ಛತ್ತೀಸ್‌ಘಡ್, ನವದೆಹಲಿ, ರಾಜಸ್ತಾನ, ಉತ್ತರಾಂಚಲ, ಪಂಜಾಬ್, ಮಧ್ಯ ಪ್ರದೇಶ ಹೀಗೆ ಅನೇಕ ರಾಜ್ಯಗಳಲ್ಲಿ ಸ್ಪರ್ಧಿಸಿ ಇಡೀ ರಾಷ್ಟ್ರವೇ ತಮ್ಮತ್ತ ನೋಡುವಂತೆ ಸಾಧನೆ ಮಾಡಿರುವುದು ದಕ್ಷಿಣ ಕನ್ನಡ ಜಿಲ್ಲೆಗೆ ಹೆಮ್ಮೆಯ ವಿಚಾರ.

1974ರಲ್ಲಿ ಮಂಗಳೂರಿನ ತೊಕ್ಕೊಟ್ಟುವಿನಲ್ಲಿ ಸುಮತಿಬಾಯಿ, ಪಾಂಡುರಂಗ ಪ್ರಭು ದಂಪತಿಯ ಪುತ್ರಿಯಾಗಿ ಜನಿಸಿದ ಇವರು ಓದಿದ್ದು ಕೇವಲ ಒಂಬತ್ತನೇ ತರಗತಿ. ಆರ್ಥಿಕ ಕಾರಣದಿಂದಾಗಿ ಶಿಕ್ಷಣವನ್ನು ಮೊಟಕುಗೊಳಿಸಿದ ಇವರು ಪವರ್ ಲಿಫ್ಟಿಂಗ್‌ನಲ್ಲಿ ಆಸಕ್ತಿ ಬೆಳೆಸಿ ಅದರಲ್ಲಿಯೇ ಸಾಧನೆ ತೋರಿದರು. ನಿರಂತರ ಅಭ್ಯಾಸ ಮಾಡಿದರು.

ಮಂಗಳೂರಿನ ಮೀನು ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಇವರಿಗೆ ಕ್ರೀಡಾ ಕೋಟಾದಲ್ಲಿ ಸರ್ಕಾರಿ ಹುದ್ದೆ ಪಡೆಯುವ ಆಕಾಂಕ್ಷೆಯಿದೆ.

ಮೊನ್ನೆ ಮಾರ್ಚ್ 8 ರಂದು ನಡೆದ ಮಹಿಳಾ ದಿನಾಚರಣೆಯಂದು ಈಕೆಗೆ ಕರ್ನಾಟಕ ಸರಕಾರದ ‘ರಾಣಿ ಚೆನ್ನಮ್ಮ’ ಪ್ರಶಸ್ತಿ ಕೂಡಾ ಸಂದಿದೆ.

‘ರಾಣಿ ಚೆನ್ನಮ್ಮ ಪ್ರಶಸ್ತಿ ದೊರೆತಿರುವುದು ನನಗೆ ಬಹಳ ಸಂತಸವಾಗಿದೆ. ನನ್ನ ಸಾಧನೆಗೆ ಇದುವರೆಗೂ ಪ್ರೋತ್ಸಾಹ ನೀಡಿದ್ದು ಮಾಧ್ಯಮ. ಹೀಗಾಗಿ ಮಾಧ್ಯಮದವರ ಸಹಾಯಕ್ಕೆ ನಾನು ಆಭಾರಿಯಾಗಿರುತ್ತೇನೆ’ ಎನ್ನುತ್ತಾರೆ ಗೀತಾಬಾಯಿ.

‘ಕನ್ನಡದ ಜೀ ವಾಹಿನಿಯ ಕಾರ್ಯಕ್ರಮವೊಂದರಲ್ಲಿ ಸಿನಿಮಾ ನಟ ಶಿವರಾಜ್ ಕುಮಾರ್ ಅವರೊಂದಿಗೆ ಭಾಗವಹಿಸಿದ್ದು ಅದೊಂದು ನನ್ನ ಜೀವನದ ಮರೆಯಲಾರದ ಕ್ಷಣ’ ಎಂದು ಸಂತಸ ವ್ಯಕ್ತಪಡಿಸುತ್ತಾರೆ.

ಕೊಂಕಣಿ ರಾಜ್ಯ ಪ್ರಶಸ್ತಿ, ಕುಡ್ಲದ ಜವಂದಿ, ಬೆಂಗಳೂರು ಸಾಹಿತ್ಯ ಅವಾರ್ಡ್, ಕೊಂಕಣಿ ನಕ್ಷತ್ರ ಹೀಗೆ ಅನೇಕ ಬಿರುದುಗಳನ್ನು ಹೊಂದಿರುವ ಇವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಮಿಂಚಬೇಕು ಎಂಬ ಆಸೆ ಇದೆ. ಆದರೆ ಆರ್ಥಿಕ ಸಮಸ್ಯೆ ಪ್ರಮುಖವಾಗಿ ಸಮಸ್ಯೆಯಾಗಿದೆ.

ದಕ್ಷಿಣ ಕನ್ನಡದಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಿದ ಕಾರಣದಿಂದಾಗಿ ನನ್ನ ಜೀವನಕ್ಕಿದ್ದ ಒಂದು ಆಧಾರ ಬಿದ್ದು ಹೋಗಬಹುದೆಂಬ ಭಯದಲ್ಲಿದ್ದೆ. ಜೊತೆಗೆ ಈ ಪ್ಲಾಸ್ಟಿಕ್ ಮಾರಾಟದಿಂದಾಗಿ ಒಮ್ಮೊಮ್ಮೆ 200 ರೂ ದುಡಿಮೆ ಆದರೂ ಆದೀತು ಆಗದೇ ಇದ್ದರೂ ಆದೀತು ಆವಾಗ ಏನು ಮಾಡಬೇಕೆಂದೇ ತೋಚುವುದಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಪವರ್‌ಲಿಫ್ಟಿಂಗ್‌ನಲ್ಲಿ ಭರವಸೆಯ ಕ್ರೀಡಾಪಟುವಾಗಿ ರೂಪುಗೊಂಡಿರುವ ಈ ಬಡ ಕ್ರೀಡಾಪಟುವಿಗೆ ಜೀವನ ನಿರ್ವಹಣೆಗೆ ಒಂದು ಉದ್ಯೋಗದ ಅವಶ್ಯಕತೆಯಿದೆ. ಹೆಚ್ಚು ತರಬೇತಿ ಪಡೆಯಲು ಹಣಕಾಸಿನ ಅಗತ್ಯವಿದೆ. ಕ್ರೀಡೆಯಲ್ಲಿ ಆಸಕ್ತಿ ಇದ್ದು, ಪ್ರೋತ್ಸಾಹ ನೀಡಬೇಕು ಎಂದು ಬಯಸುವವರು ಇವರಿಗೆ ಸಹಾಯ ಮಾಡಿದರೆ ಭವಿಷ್ಯತ್ತಿನಲ್ಲಿ ಈಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸಾಧನೆ ಮಾಡುವುದರಲ್ಲಿ ಸಂಶಯವಿಲ್ಲ. ಆರ್ಥಿಕವಾಗಿ ಸಹಾಯ ನೀಡಬೇಕೆನ್ನುವ ಆಕಾಂಕ್ಷಿಗಳು ಇವರನ್ನು 9740538259 ನಲ್ಲಿ ಸಂಪರ್ಕಿಸಬಹುದು.. ■

